**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 1518/2023**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

-ವಿರುದ್ಧ-

ಆರೋಪಿ/ತರು ಃ ಶ್ರೀಮತಿ ಪಾರ್ವತಮ್ಮ ಮತ್ತು ಇನ್ನೊಬ್ಬರು

-ಃದೋಷಾರೋಪಣೆಃ-

ಶ್ರೀ ವೈದ್ಯ ಶ್ರೀಕಾಂತ್, ಬಿ.ಎಸ್ಸಿ, ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ತರೀಕೆರೆ ಆದ ನಾನು ಈ ಕೆಳಗೆ ಕಾಣಿಸಿರುವಃ

1. ಶ್ರೀಮತಿ ಪಾರ್ವತಮ್ಮ ಕೋಂ ವೆಂಕಟರಾಮಯ್ಯ, 80 ವರ್ಷ, ಗೃಹಿಣಿ, ವಾಸಃಬೆಟ್ಟತಾವರೆಕೆರೆ ಗ್ರಾಮ, ತರೀಕೆರೆ ತಾಃ
2. ಗೌರೀಶ್ ಬಿನ್ ವೆಂಕಟರಾಮಯ್ಯ, 51 ವರ್ಷ, ವ್ಯವಸಾಯ, ವಾಸಃಬೆಟ್ಟತಾವರೆಕೆರೆ ಗ್ರಾಮ, ತರೀಕೆರೆ ತಾಃ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಎಂದರೆಃ

ದಿಃ16.05.2023 ರಂದು ಮಧ್ಯಾಹ್ನ 1-00 ರ ಸಮಯದಲ್ಲಿ ತರೀಕೆರೆ ಪೊಲೀಸ್ ಠಾಣಾ ಸರಹದ್ದಿನ ಬೆಟ್ಟತಾವರೆಕೆರೆ ಗ್ರಾಮದ ಅಂತರಘಟ್ಟಮ್ಮ ದೇವಸ್ಥಾನದ ಬಲಭಾಗದ ಕಾಂಪೌಂಡ್ ಪಕ್ಕದ ರಸ್ತೆಯಲ್ಲಿ, ಬೆಟ್ಟತಾವರೆಕೆರೆ ಗ್ರಾಮದ ಸಿದ್ದರಹಳ್ಳಿ ಸರ್ವೆ ನಂ.44 ರಲ್ಲಿ 3 ಎಕರೆ ತೆಂಗಿನ ತೋಟದ ವಿಚಾರದಲ್ಲಿ, ಸದರಿ ತೋಟವು ಚಾಸಾ-1 ರವರ ಗಂಡನ ತಂದೆ ಭೈರಪ್ಪರವರ ಹೆಸರಿನಲ್ಲಿರುತ್ತದೆ, ಸದರಿ ತೆಂಗಿನ ತೋಟದ ಜಮೀನು ನಮಗೆ ಬಂದಿದ್ದು, ನಾವುಗಳೇ ಸ್ವಾಧೀನ ಹೊಂದಿ ಅನುಭವದಲ್ಲಿರುತ್ತೇವೆಂದು ಈ ವಿಚಾರದಲ್ಲಿ ಆರೋಪಿತರಾದ ನೀವುಗಳು ಸೇರಿಕೊಂಡು ಸದರಿ ಜಮೀನು ನಮಗೂ ಬರಬೇಕೆಂದು, ಅವರ ಮನೆಯ ಮುಂದೆ ಅವಾಚ್ಯವಾಗಿ ಬೈಯುತ್ತಿದ್ದ ಬಗ್ಗೆ ಚಾಸಾ-1 ರವರು ಏಕೆ ಬೈಯುತ್ತೀರಾ ಎಂದು ನಿಮಗೆ ಕೇಳಿದ್ದಕ್ಕೆ ನೀವುಗಳೆಲ್ಲರೂ ಸೇರಿಕೊಂಡು ಚಾಸಾ-1 ರವರ ಮಾತನಾಡಲು

ಬಿಡದೆ ಬೋಸುಡಿ, ಹಾದರಗಿತ್ತಿ ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**504** ಸಹಕಲಂ.**34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಹಿಡಿದು ಎಳೆದಾಡಿ ಅವರ ಮಾನಕ್ಕೆ ಅವಮಾನವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**354** ಸಹಕಲಂ.**34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ಕೈಯಿಂದ ಸೊಂಟಕ್ಕೆ, ಮೈಕೈಗೆ ಹೊಡೆದಿದ್ದು ಅಲ್ಲದೇ ಆರೋಪಿತರಾದ ನೀವುಗಳು ಚಾಸಾ-2 ರವರಿಗೂ ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**323** ಸಹಕಲಂ.**34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ 2 ನೇ ಆರೋಪಿಯಾದ ನೀವು ಚಾಸಾ-1 ರವರಿಗೆ ದೊಣ್ಣೆಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**324** ಸಹಕಲಂ.**34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಆರೋಪಿತರಾದ ನೀವು ಚಾಸಾ-1 ರವರಿಗೆ ನೀವು ತೋಟಕ್ಕೆ ಹೋದರೆ ಸುಡುತ್ತೇವೆಂದು ಬೆದರಿಕೆ ಹಾಕಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.**506** ಸಹಕಲಂ.**34** ರ ರೀತ್ಯಾ ಅಪರಾಧವನ್ನು ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿಃ19.05.2025

Sd/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ.

ಪ್ರಃ 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉಃ ಎ-1

ಎ-2

ಪ್ರಃ 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉಃ ಎ-1

ಎ-2

(ಆರೋಪವನ್ನು ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಬರೆದುಕೊಂಡಿರುವುದು ನಿಜ ಮತ್ತು ಸತ್ಯವಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

ದಿನಾಂಕಃ19.05.2025

Sd/-

ಹಿ. ಪ್ರಧಾನ ಪ್ರ.ದ.ನ್ಯಾ.ದಂ ತರೀಕೆರೆ.

ಆರೋಪಿತರ ಸಹಿಃ